

# ರಂಗಭೂಮಿಯಿಂದ ಸಿಲ್ಲಿಲಲ್ಲಿಯವರೆಗೆ

## ಜಗದೀಶ್ ಕುಮಾರ್ (ಜೆಕೆ)

### ಕಲರ್ಸ್ ಸೂಪರ್‌ನ 'ಸಿಲ್ಲಿ ಲಲ್ಲಿ'ಯ ರಂಗನಾಥ

◆ **ಜೆಕೆ ಹೆಸರಿನ ವಿಶೇಷ ಏನು?**

'ಮಜಾ ಭಾರತ'ದ ಮೂಲಕ ಟೀವಿಗೆ ಪ್ರವೇಶ ಮಾಡಿದೆ. ನನ್ನ ಹೆಸರು ಜಗದೀಶ್ ಕುಮಾರ್, ಜಗದೀಶ್ ಮೈಸೂರು ಎಂದು ಕರೆಯುತ್ತಿದ್ದರು. ಕಾಮಿಡಿ ಟೈಮ್ಸ್ ನಂತರ ಜೆಕೆ ಹೆಸರು ನನಗೆ ಪ್ರಾಪ್ತವಾಗಿದೆ. ಇಲ್ಲಿ ರಂಗನಾಥನಾಗಿ ಕಾಣಿಸಿಕೊಳ್ಳುತ್ತಿದ್ದೇನೆ. ವಿಠಲ್ ರಾವ್‌ನ ಆತ್ಮೀಯ ಗೆಳೆಯ. ಡಾಕ್ಟರ್ ಮನೆಯಲ್ಲೇ ಬಾಡಿಗೆ ಇದ್ದೇನೆ. ಇದುವರೆಗೂ ಒಂದು ತಿಂಗಳೂ ಬಾಡಿಗೆಯನ್ನು ಪಾವತಿಸಿಲ್ಲ. ತುಂಬ ಜಿಪುಣ ಅವರ ಮನೆಯಲ್ಲೇ ಮೂರು ಹೊತ್ತು ಊಟ ಮಾಡುತ್ತೇನೆ.

◆ **ಹಾಸ್ಯಕ್ಕೆ ಸೀಮಿತ ಆಗುತ್ತೇನೆ, ನಾಯಕನಾಗುವುದಿಲ್ಲ ಎಂದೇನಾದರೂ ಅನ್ನಿಸಿದೆಯಾ?**

ಅದು ಏನೇ ಆದರೂ ಕೊರತೆ ಎಂದು ಅನ್ನಿಸುವುದಿಲ್ಲ. ಜನ ನಮ್ಮನ್ನು ಹೇಗೆ ತೆಗೆದುಕೊಳ್ಳುತ್ತಿದ್ದಾರೆ ಎನ್ನುವುದರ ಮೇಲೆ ನಾವು ಕೆಲಸ ಮಾಡಬೇಕು. ಅದನ್ನು ಹೊರತಾಗಿ ಒಂದೆರಡು ಪ್ರಯೋಗಾತ್ಮಕವಾಗಿ ಹೊಸ ಇಮೇಜ್ ನೀಡಬಹುದು. ಅದನ್ನು ಜನ ಸ್ವೀಕರಿಸಿದರೆ ಬದಲಾಗಬಹುದು. ಇಲ್ಲದಿದ್ದರೆ ಇದ್ದ ಹಾಗೆ ಮುಂದುವರಿಯಬಹುದು. ನಾವು ಏನೇ ಮಾಡಿದರೂ ಪ್ರೇಕ್ಷಕರಿಗಾಗಿಯೇ ಮಾಡುತ್ತೇವೆ. ಜನ ಸ್ವೀಕರಿಸಲಿಲ್ಲ ಅಂದರೆ, ನನ್ನಲ್ಲೇ ಏನೋ ತಪ್ಪಾಗಿದೆ ಎಂದು ಅರ್ಥ. ನಾಯಕ ಆಗಲಿ, ವಿಲನ್ ಆಗಲಿ, ಕಾಮಿಡಿಯನ್ ಆಗಲಿ ಏನೇ ಆಗಿದ್ದರೂ ಮೂಲದಲ್ಲಿ ನಾನು ಒಬ್ಬ ನಟ. ಇಲ್ಲಿ ರಂಗನಾಥ್ ಅಲ್ಲದೆ ಬೇರೆ ಬೇರೆ ಗೆಟಪ್ ಹಾಕಿದಾಗ ಪಾತ್ರದ ಹರವು ಬದಲಾಗುತ್ತದೆ. ಉದಾ ಪೊಲೀಸ್, ಕಳ್ಳ, ಭಿಕ್ಷುಕ... ಹೀಗೆ ಅನೇಕ ಗೆಟಪ್ ಹಾಕಬೇಕಾಗುತ್ತದೆ. ಸಾಕಷ್ಟು ಕಾಮಿಡಿಯನ್ ನಟರು ನಾಯಕರಾಗಿದ್ದಾರೆ. ಕೆಲವರು ವಿಫಲರಾಗಿದ್ದಾರೆ. ಅವರ ವೈಫಲ್ಯ– ಸಾಫಲ್ಯಗಳು ನನಗೆ ಮಾದರಿ.

◆ **ಕಲೆ ನಿಮ್ಮನ್ನು ಹೇಗೆ ಕೈ ಹಿಡಿಯಿತು ಅಥವಾ ನೀವು ಕಲೆಯನ್ನು ಹೇಗೆ ಕೈ ಹಿಡಿದಿರಿ?**

ಎರಡೂ ಆಗಿದೆ. 2009ರಲ್ಲಿ ಬಿಬಿಎಂ ಮುಗಿಸಿ ಮೈಸೂರಿನಲ್ಲಿಯೇ ಖಾಸಗಿ ಕಂಪನಿಯಲ್ಲಿ ಕೆಲಸಕ್ಕೆ ಸೇರಿದ್ದೆ. ಒಂದು ವರ್ಷ ಕೆಲಸವನ್ನೂ ಮಾಡಿದ್ದೆ. ಸ್ನೇಹಿತರ ಜೊತೆ ನನ್ನ ಮಾತಿನ ವೈಖರಿ ಬೆರಗು ಮೂಡಿಸಿತ್ತು. ಬಹುತೇಕರು ಆರ್‌ಜೆ ಆಗು ಎನ್ನುವ ಒತ್ತಡ ಹೇರಿದರು. ಅದೇ ಸಮಯಕ್ಕೆ ಸರಿಯಾಗಿ ರೇಡಿಯೊ ಜಾಕಿಗೆ ಮೈಸೂರಲ್ಲೇ ಒಂದು ಆಡಿಷನ್ ಇತ್ತು. ನನಗೆ ಅದರಲ್ಲಿ ಒಂದಿಷ್ಟೂ ಆಸಕ್ತಿ ಇರಲಿಲ್ಲ. ಸ್ನೇಹಿತರ ಒತ್ತಾಯಕ್ಕೆ ಆಡಿಷನ್ ನೀಡಿದೆ. ಐದುನೂರು ಮಂದಿಯಲ್ಲಿ ನಾವು ಐವರು ಆಯ್ಕೆ ಆದೆವು. ನೇಮಕಾತಿಯ ಸಂದರ್ಭದಲ್ಲಿ ಮೂರು ತಿಂಗಳು ತರಬೇತಿ ನಂತರ ಕೆಲಸ. ತರಬೇತಿಯ ಅವಧಿಯಲ್ಲಿ ಸಂಬಳ ಇಲ್ಲ ಎನ್ನುವ ಕರಾರು ಮಾಡಿದ್ದರು. ಕರಾರಿನಂತೆ ತರಬೇತಿಯ ನಂತರ ಕೆಲಸ ಸಿಗದೆ ದುರಂತದಲ್ಲಿ ಜಾಕಿ ಪಯಣ ಅಂತ್ಯ ಆಯ್ತು. ಇದ್ದ ಕೆಲಸವನ್ನೂ ಕಳೆದುಕೊಂಡು ಮಂಗನಂತಾಗಿದ್ದೆ. ಆಗ ನನಗೆ ನೆರವಿಗೆ ಬಂದಿದ್ದು ನನ್ನ ಕಾಲೇಜು ದಿನಗಳ ಅನುಭವ. ಎನ್‌ಎಸ್‌ಎಸ್‌ನಲ್ಲಿ ಇದ್ದಾಗ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದೆ. ಅದು ಸಣ್ಣದಾಗಿ ನನ್ನನ್ನು ಪ್ರಭಾವಿಸಿತ್ತು. ಅದೇ ಗುಂಗಿನಲ್ಲಿ 'ರಂಗ ಹೆಜ್ಜೆ ಸಾಂಸ್ಕೃತಿಕ ತಂಡ' ಸೇರಿ ಮೈಸೂರಿನಲ್ಲಿ ಬೀದಿ ನಾಟಕ ಮಾಡಲು ಆರಂಭಿಸಿದೆ. ನಂತರ ಅನೇಕ ತಂಡಗಳಲ್ಲಿ ನಾಟಕ ಆಡಿದೆ. ಕೆಲವೊಂದು ತಂಡಗಳು 500 ರೂಪಾಯಿ ಕೊಡುತ್ತಿದ್ದವು. ಕೆಲವೊಮ್ಮೆ ಉಚಿತವಾಗಿಯೂ ಕೆಲಸ ಮಾಡಬೇಕಾಗಿತ್ತು. ಆಗ ದಿನೇಶ್ ಚಮ್ಮಾಳಿಗೆ ನೀನಾಸಂ ಎಂಬುವರು ನನಗೆ ಗುರುಗಳಾಗಿ ಸಿಕ್ಕರು ಅವರ ಮಾರ್ಗದರ್ಶನ ಹಾದಿಯಲ್ಲಿ ಸಾಗುತ್ತಿದ್ದೇನೆ.

◆ **ಹಿಂದಿನ ಸಿಲ್ಲಿ ಲಲ್ಲಿ ನೀವು ನೋಡಿದ್ರಾ?**

ಆಗ ಶಾಲೆಯಲ್ಲಿ ಓದುತ್ತಿದ್ದೆ. ರಾತ್ರಿ 7.30 ಗಂಟೆಗೆ ಬರ್ತಾ ಇತ್ತು. ಬೇರೆಯವರು ಅದನ್ನು ನೋಡಿ ನಗುವುದನ್ನು ಕಂಡು ಅದಕ್ಕೆ ಆಕರ್ಷಿತನಾಗಿದ್ದೆ. ನಮ್ಮ ತಾತ ಮನೆಯ ಒಳಗಾದರೆ ಟೀವಿ ನೋಡುತ್ತೇನೆ ಎಂದು ಅಂಗಳದಲ್ಲಿ ಕೂರಿಸಿ ಓದಿಸುತ್ತಿದ್ದರು. 'ಸಿಲ್ಲಿ ಲಲ್ಲಿ' ಸಮಯಕ್ಕೆ ಅಲ್ಲಿಂದ ಒಳ ಹೋಗಿ ಟೀವಿ ನೋಡ್ತಾ ಇದ್ದೆ. ಅದಕ್ಕಾಗಿಯೇ ಒಮ್ಮೆ ಅವರಿಂದ ಪೆಟ್ಟನ್ನೂ ತಿಂದಿದ್ದೇನೆ. ಈಗ ಏಟು ತಿಂದ ಧಾರಾವಾಹಿಯಲ್ಲಿ ನಟಿಸುತ್ತಿದ್ದೇನೆ.

◆ **ನಡೆದ ಹಾದಿಯನ್ನು ಹೊರಳಿ ನೋಡಿದರೆ...**

ನಾಟಕ ಕಲಿಯಲು ಆರಂಭಿಸಿದೆ. ನಟನೆ ಜೊತೆ ತಾಂತ್ರಿಕ ಕೆಲಸ ಕಲಿಯಬೇಕು ಎಂದು ಚಮ್ಮಾಳಿಗೆ ಸರ್ ಹೇಳಿದರು. ಕಾಸ್ಟ್ಯೂಮ್ಸ್ ಮತ್ತು ಮೇಕಪ್ ಕಲಿಯಲು ಸಾಧ್ಯವಾಯಿತು. ಬೇರೆ ಇನ್ನೇನೂ ಸಾಧ್ಯ ಇರಲಿಲ್ಲ. ಅವರ ಪ್ರಕಾರ ಮ್ಯೂಸಿಕ್, ಲೈಟಿಂಗ್, ನಿರ್ದೇಶನದಿಂದ ಹಿಡಿದು ರಂಗ ಚಟುವಟಿಕೆಯನ್ನು ಕಲಿಬೇಕಿತ್ತು. ಏನಾದರೂ ಆಗಲಿ ನಟನೆಯನ್ನೇ ಕಲಿಯುತ್ತೇನೆ ಎಂದು ಕುಳಿತೆ. ನಾಟಕ ಇಲ್ಲದಿದ್ದಾಗ ಅವಕಾಶ ಸಿಕ್ಕರೆ ಡೊಳ್ಳು, ಪೂಜಾಕುಣಿತಕ್ಕೆ ಹೋಗುತ್ತಿದ್ದೆ. ಅಲ್ಲಿ ರೂ. 500 ಕೂಲಿ ಸಿಗ್ತಾ ಇತ್ತು. ನಮ್ಮ ಸಂಬಂಧಿಕರ ಮನೆ ಹತ್ತಿರ ಬಂದರೆ ಮುಖ ಮುಚ್ಚಿಕೊಂಡು ಕುಣಿದು ಬರ್ತಾ ಇದ್ದೆ. ಆಗ ಮನೆಯಲ್ಲಿ ಒತ್ತಡ ಹೆಚ್ಚಾಯಿತು. ಡಿಗ್ರಿ ಓದಿದ ಮಗ ಸುಮ್ಮನೆ ಬಣ್ಣ ಹಚ್ಚಿ ಕುಣಿಯಲು ಆರಂಭಿಸಿದ ಎಂದು ಪೋಷಕರು ಆತಂಕ ವ್ಯಕ್ತಪಡಿಸಿದರು. ನಮ್ಮ ಸೋದರ ಮಾವನವರ ಹತ್ತಿರ ಮಾತನಾಡಿ ಎರಡು ವರ್ಷ ಸಮಯ ಕೇಳಿಕೊಂಡೆ. ಅವರು ನನ್ನ ಪಾಡಿಗೆ ನನ್ನನ್ನು ಬಿಟ್ಟು ಬಿಡಲು ಹೇಳಿದರು. ಅನೇಕ ಐತಿಹಾಸಿಕ– ಪೌರಾಣಿಕ ನಾಟಕಗಳು ಸೇರಿದಂತೆ ಹಲವಾರು ನಾಟಕಗಳನ್ನು ಆಡಿದೆ. 12 ಗಂಟೆಯಷ್ಟು ದೀರ್ಘ ಕಾಲದ ನಾಟಕಕ್ಕೂ ಬಣ್ಣ ಹಚ್ಚಿದ್ದೇನೆ. ಆದರೆ ಸಂಪಾದನೆ ಮಾತ್ರ ಏನೂ ಇಲ್ಲ ಎನ್ನುವ ಆತಂಕ ಇದ್ದೇ ಇತ್ತು. ರಂಗಾಯಣದ ಸಂಚಾರಿ ರಂಗ ಘಟಕದಲ್ಲಿ ನನಗೆ ಅವಕಾಶ ಸಿಗ್ತು. ಆರು ತಿಂಗಳು ಸಂಭಾವನೆಯನ್ನೂ ಪಡೆದೆ.

'ಮಜಾ ಭಾರತ್' ಸೀಜನ್ ಒಂದು ಅವಕಾಶ ಸಿಕ್ಕಿದ್ದೂ ಕೂಡ ನನ್ನ ಗುರುಗಳಿಂದ. ಅವರಿಗೆ ಮೆಂಟರ್ ಆಗಿ ಆಹ್ವಾನ ಬಂದಿತ್ತು. ಅವರು 'ನನಗಿಂತ ನನ್ನ ಶಿಷ್ಯ ಇದ್ದಾನೆ. ಅವನಿಗೆ ಮೆಂಟರ್ ಬೇಡ, ನಟನೆಗೆ ಅವಕಾಶ ಕೊಡಿ' ಎಂದು ಕೇಳಿ ನನಗೆ ಅವಕಾಶ ಆಡಿಷನ್ ನೀಡುವ ಭರವಸೆ ಪಡೆದು ಅವರು ಹೋಗಿದ್ದರು. ಆಡಿಷನ್ ನೀಡಲು ಹೋದ ದಿನ ನನ್ನ ಎತ್ತರ ಮತ್ತು ಆಕಾರ ನೋಡಿ. ವಿಲನ್ ಮೆಟಿರಿಯಲ್ ತೆಗೆದುಕೊಂಡು ಹೇಗ್ರಿ ಕಾಮಿಡಿ ಮಾಡುವುದು ಎಂದು ಅಲ್ಲಿ ಹೇಳಿ ನಕ್ಕಿದ್ದರು. ಕೊನೆಗೆ ಒಂದು ಸ್ಕಿಟ್ ಮಾಡಿಸಿದರು. ನನ್ನ ಅಭಿನಯ ಅವರಿಗೆ ಇಷ್ಟವಾಗಿ ಕೊನೆಗೂ ಅವಕಾಶ ಸಿಕ್ಕಿತು.

■ **ರಾಘವೇಂದ್ರ ಕೆ.**